ಪ್ರಶ್ನೆ ಕೇಳುತ್ತಿದ್ದೇವೆಯೇ? ಅದಕ್ಕೆ ನಾನು ಕೇಳುತ್ತಾ ಇರತಕ್ಕಂಥದ್ದು, ಸ್ಪಷ್ಟವಾಗಿ ಯಾವ ತಿಂಗಳಲ್ಲಿ ಕೆಲಸ ಪ್ರಾರಂಭ ಮಾಡುತ್ತೀರಿ ಮತ್ತು ಎಷ್ಟರೊಳಗೆ ಮುಗಿಸುತ್ತೀರಿ? ಎಲ್ಲಾ ಹಣ ಬಿಡುಗಡೆಯಾಗಿದೆ, ಜಿಲ್ಲಾಧಿಕಾರಿಯ ಕಛೇರಿಗೆ ಹಣ ಬಂದಿದೆ ಎನ್ನುವುದನ್ನು ತಾವು ಹೇಳುತ್ತೀರಿ. ಎಂದು ಪ್ರಾರಂಭ ಮಾಡುತ್ತೀರಿ? ನಾನು ನೇರವಾಗಿ ಈ ಪ್ರಶ್ನೆ ಕೇಳುತ್ತಿದ್ದೇನೆ, ಅದರಲ್ಲಿ ಏನಿದೆ?

ಶ್ರೀ ಮಿರಾಜುದ್ದೀನ್ ಎನ್ ಪಟೇಲ್:- ದುಡ್ಡು ಏನಿದೆ ಆ ಅಮೌಂಟ್ ರಿಲೀಸ್ ಆಗಿದೆ. ಇನ್ನೂ ವರ್ಕ್ ಏಕೆ ಸ್ಟಾರ್ಟ್ ಆಗಿಲ್ಲ ಎಂದು ತಾವು ಕೇಳುವುದು. ದುಡ್ಡು ಅಲ್‌ರೆಡಿ ಇದೆ. 38.33 ಲಕ್ಷ ರೂ. ದುಡ್ಡು ಈಗಾಗಲೇ ರಿಲೀಸ್ ಆಗಿದೆ. ಅದರ ಕೆಲಸ ಯಾವತ್ತು ಸ್ಟಾರ್ಟ್ ಮಾಡುತ್ತೀರಿ ಎಂದು ತಾವು ಕೇಳುತ್ತೀದ್ದೀರಿ? ಒಂದು ತಿಂಗಳಲ್ಲಿ ನಾನು ವರ್ಕ್ ಸ್ಟಾರ್ಟ್ ಮಾಡಿಸುತ್ತೇನೆ. 38 ಲಕ್ಷ ರೂ. ಗಳ ಅಮೌಂಟ್‌ನ ಹಣವನ್ನು ಮೊದಲು ಖರ್ಚು ಮಾಡಬೇಕು. 1.61 ಕೋಟಿ ರೂ.ಗಳು ಇನ್ನೂ ರಿಲೀಸ್ ಆಗಬೇಕೆಂಬ ಪ್ರಪೋಸಲ್ ಏನಿದೆ, ಅದು ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಸಲುವಾಗಿ ಪೆಂಡಿಂಗ್ ಇದೆ. ಅದು ಅಪ್ರೂವಲ್ ಅದಾಗ ನಾವು ಆ ಅಮೌಂಟ್ ಆನ್ನು ಕೂಡ ರಿಲೀಸ್ ಮಾಡುತ್ತೇವೆ. ಈಗ ಅಲ್ಲಿ 38.33 ಲಕ್ಷ ರೂ. ಗಳ ವರ್ಕ್ ಏನಿದೆ ಅದನ್ನೂ ನಾನು ಇಮಿಡಿಯೇಟ್ಲಿ ಸ್ಟಾರ್ಟ್ ಮಾಡಿಸುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:- ಮಾನ್ಯ ಉಪಾಧ್ಯಕ್ಷರೇ, ಸಕಾಲದಲ್ಲಿ ಪಡೆದು ಹಣ ಖರ್ಚು ಮಾಡದೇ ಇದ್ದರೆ ಈ ಯೋಜನೆ ಬಿದ್ದು ಹೋಗುತ್ತದೆ. ಆದುದರಿಂದ ಆದಷ್ಟು ಶೀಘ್ರ ಹಣವನ್ನು ಖರ್ಚು ಮಾಡಿ.

ತಿಪಟೂರು ತಾಲ್ಲೂಕು ಹೊನ್ನವಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಪ್ರೌಢಶಾಲೆಯನ್ನು ಮೇಲ್ದರ್ಜೆಗೇರಿಸಿ ಪದವಿ ಪೂರ್ವ ಕಾಲೇಜನ್ನಾಗಿ ಮಾರ್ಪಾಡಿಸುವ ಬಗ್ಗೆ.

ಶ್ರೀ ಬಿ. ನಂಜಾಮರಿ (ತಿಪಟೂರು):- ಮಾನ್ಯ ಉಪಾಧ್ಯಕ್ಷರೇ, ತಿಪಟೂರು ತಾಲ್ಲೂಕು ಹೊನ್ನವಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಪ್ರೌಢಶಾಲೆಯನ್ನು ಮೇಲ್ದರ್ಜೆಗೇರಿಸಿ ಪದವಿಪೂರ್ವ ಕಾಲೇಜನ್ನಾಗಿ ಮಾರ್ಪಡಿಸುವ ಬಗ್ಗೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಉಪಾಧ್ಯಕ್ಷರು:- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು ಸದನದಲ್ಲಿಲ್ಲ. ಸರ್ಕಾರದ ಪರವಾಗಿ ಯಾರಾದರೊಬ್ಬರು ಮಾನ್ಯ ಸದಸ್ಯರ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡಿ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿ):- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಈಗ ತಾನೇ ಸದನದಲ್ಲಿದ್ದರು, ಇದೀಗ ಹೊರಗಡೆ ಹೋಗಿದ್ದಾರೆ. ಮಾನ್ಯ ಮಂತ್ರಿಗಳು ಈಗ ದೆಹಲಿಗೆ ಹೋಗುತ್ತಿದ್ದಾರೆ. ಆದ್ದರಿಂದ ಸೋಮವಾರ ಮಾನ್ಯ ಸಚಿವರಿಂದ ಸದಸ್ಯರಿಗೆ ಉತ್ತರ ಕೊಡಿಸುತ್ತೇನೆ.